ನಮೂನೆ XII

(ನಿಯಮ 14(3))

# ಚುನಾವಣಾ ನೋಟೀಸು

ಸಹಕಾರ ಸಂಘಗಳ ಜಂಟಿ ನಿಬಂಧಕರು ಹಾಗೂ ಚುನಾವಣಾಧಿಕಾರಿಗಳು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು ಇವರ ಆದೇಶ ಸಂಖ್ಯೆ ಸಚುಪ್ರಾ/ವ್ಯೆ.ಪ್ರಾ/ವ್ಯೆ.ಜಿ/ಜಂ.ನಿ/ರಿಆನೇ/34/2024 ದಿನಾಂಕ 13.11.2024 ಹಾಗೂ ಸಚುಪ್ರಾ/ವ್ಯೆ.ಪ್ರಾ/ಜಂ.ನಿ/ಚುನಾವಣೆ/34/2024 ದಿನಾಂಕ 10.01.2025 ರಂತೆ ಟೀಚರ್ಸ್ ಕೋ-ಆಪರೇಟಿವ್ ಬ್ಯಾಂಕ್ ನಿಯಮಿತ, ಉಡುಪಿ ಇದರ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಯ ಆಡಳಿತ ಮಂಡಳಿಯ ಸದಸ್ಯರ ಆಯ್ಕೆಗಾಗಿ **ದಕ್ಷಿಣ ಕನ್ನಡ ಜಿಲ್ಲೆಯ ಶಿಕ್ಷಕ ಸದಸ್ಯರಿಗೆ-ಕೆನರಾ ಪ್ರೌಢ ಶಾಲೆ, ಕೊಡಿಯಾಲ್‌ಬೈಲ್, ಮಂಗಳೂರು** ಇಲ್ಲಿ ಹಾಗೂ **ಉಳಿದ ಜಿಲ್ಲೆಯ ಶಿಕ್ಷಕ ಸದಸ್ಯರಿಗೆ-ಎಂ.ಜಿ.ಎಂ. ಕಾಲೇಜು, ಕುಂಜಿಬೆಟ್ಟು, ಉಡುಪಿ** ಇಲ್ಲಿ ದಿನಾಂಕ **02.02.2025** ರಂದು **ಪೂರ್ವಾಹ್ನ 9-00 ಗಂಟೆಯಿಂದ ಅಪರಾಹ್ನ 4-00 ಗಂಟೆಯವರೆಗೆ** ಚುನಾವಣೆ ಜರುಗಲಿದ್ದು, ಚುನಾವಣಾ ವೇಳಾಪಟ್ಟಿಯನ್ನು ಈ ಕೆಳಗಿನಂತೆ ಪ್ರಕಟಿಸಲಾಗಿದೆ.

## ಚುನಾವಣಾ ವೇಳಾಪಟ್ಟಿ

| ಬ್ಯಾಂಕಿನ ಬೈಲಾ ಸಂಖ್ಯೆ 46(1) ರ ಪ್ರಕಾರ ಆಯ್ಕೆಯಾಗಬೇಕಾದ ಸ್ಥಾನಗಳು | | ಸ್ಥಾನಗಳ ಸಂಖ್ಯೆ | ಒಟ್ಟು ಸ್ಥಾನಗಳ ಸಂಖ್ಯೆ |
|---|---|---|---|
| ಎ) ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲಾ ವಿಭಾಗದಿಂದ | | | 9 |
| ಈ ಪೈಕಿ 1) ಸಾಮಾನ್ಯ ವಿಭಾಗದಿಂದ | : | 05 | |
| 2) ಮಹಿಳಾ ಮೀಸಲು ಸ್ಥಾನ | : | 01 | |
| 3) ಪರಿಶಿಷ್ಟ ಜಾತಿ ಮೀಸಲು ಸ್ಥಾನ | : | 01 | |
| 4) ಪರಿಶಿಷ್ಟ ವರ್ಗ ಮೀಸಲು ಸ್ಥಾನ | : | 01 | |
| 5) ಹಿಂದುಳಿದ ಪ್ರವರ್ಗದಿಂದ 'ಎ' ಮತ್ತು 'ಬಿ' ಮೀಸಲು ಸ್ಥಾನ | : | 01 | |
| ಬಿ) ಪ್ರೌಢ ಶಾಲೆ ಮತ್ತು ಪದವಿ ಪೂರ್ವ ವಿದ್ಯಾಲಯಗಳ ವಿಭಾಗದಿಂದ | | | 4 |
| ಈ ಪೈಕಿ 1) ಸಾಮಾನ್ಯ ವಿಭಾಗದಿಂದ | : | 03 | |
| 2) ಮಹಿಳಾ ಮೀಸಲು ಸ್ಥಾನ | : | 01 | |
| ಸಿ) ಕಾಲೇಜು ವಿಭಾಗದಿಂದ | | | 3 |
| ಈ ಪೈಕಿ 1) ಸಾಮಾನ್ಯ ವಿಭಾಗದಿಂದ | : | 02 | |
| 2) ಹಿಂದುಳಿದ ಪ್ರವರ್ಗದಿಂದ 'ಎ' ಮತ್ತು 'ಬಿ' ಮೀಸಲು ಸ್ಥಾನ | : | 01 | |
| ಡಿ) ವೃತ್ತಿಪರ ಹಾಗೂ ತಾಂತ್ರಿಕ ವಿದ್ಯಾ ಸಂಸ್ಥೆಗಳ ವಿಭಾಗದಿಂದ | : | 02 | 02 |
| ಇ) ಠೇವಣಾತಿ ಸದಸ್ಯ ವಿಭಾಗದಿಂದ | : | 01 | 01 |
| ಒಟ್ಟು | : | 19 | 19 |

| ಕ್ರ. ಸಂ. | ಸಹಕಾರ ಸಂಘಗಳ ನಿಯಮ | ವಿವರಗಳು | ದಿನಾಂಕ ಮತ್ತು ಸಮಯ | ನಿಯುಕ್ತಿಗೊಳಿಸಲಾದ ಅಧಿಕಾರಿ ಹಾಗೂ ಸ್ಥಳ |
|---|---|---|---|---|
| 1. | 14 ಎ | ಉಮೇದುವಾರರು ಸ್ವತ: ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ 19.01.2025 ರಿಂದ 25.01.2025 ರವರೆಗೆ ಬೆಳಿಗ್ಗೆ 11-00 ರಿಂದ ಮಧ್ಯಾಹ್ನ 2-00 ಗಂಟೆಯವರೆಗೆ | ಚುನಾವಣಾ ನಿರ್ವಾಚನಾಧಿಕಾರಿಯವರಿಗೆ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| 2. | 14 ಬಿ | ನಾಮ ಪತ್ರಗಳ ಪರಿಶೀಲನಾ ದಿನಾಂಕ, ಸಮಯ ಮತ್ತು ಸ್ಥಳ | ದಿನಾಂಕ 26.01.2025 ರಂದು ಅಪರಾಹ್ನ 3-00 ಗಂಟೆಗೆ | ಚುನಾವಣಾ ನಿರ್ವಾಚನಾಧಿಕಾರಿಯವರಿಂದ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| 3. | 14 ಬಿ(4) | ಅರ್ಹ ಉಮೇದುವಾರರ ನಾಮಪತ್ರಗಳ ಪಟ್ಟಿ ಪ್ರಕಟಣೆಯ ದಿನಾಂಕ ಮತ್ತು ಸಮಯ | ದಿನಾಂಕ 26.01.2025 ರಂದು ನಾಮಪತ್ರಗಳ ಪರಿಶೀಲನೆಯ ನಂತರ | ಚುನಾವಣಾ ನಿರ್ವಾಚನಾಧಿಕಾರಿಯವರಿಂದ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| 4. | 14 ಸಿ | ನಾಮಪತ್ರಗಳನ್ನು ಹಿಂದಕ್ಕೆ ಪಡೆಯಲು ಕೊನೆಯ ದಿನಾಂಕ ಮತ್ತು ಸಮಯ | ದಿನಾಂಕ 27.01.2025 ರಂದು ಮಧ್ಯಾಹ್ನ 3-00 ಗಂಟೆಯ ಒಳಗೆ | ಬ್ಯಾಂಕಿನ ಚುನಾವಣಾ ನಿರ್ವಾಚನಾಧಿಕಾರಿಯವರಲ್ಲಿ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| 5. | 14 ಡಿ | ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುವ ದಿನಾಂಕ ಮತ್ತು ಸಮಯ | ದಿನಾಂಕ 27.01.2025 ರಂದು ಮಧ್ಯಾಹ್ನ 3-00 ಗಂಟೆಯ ನಂತರ | ಬ್ಯಾಂಕಿನ ಚುನಾವಣಾ ನಿರ್ವಾಚನಾಧಿಕಾರಿಯವರಿಂದ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| 6. | 14 ಇ | ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆ ನೀಡುವುದು | ದಿನಾಂಕ 27.01.2025 ರಂದು ಸಂಜೆ 4-30 ಗಂಟೆಗೆ | ಚುನಾವಣಾ ನಿರ್ವಾಚನಾಧಿಕಾರಿಯವರಿಂದ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| 7. | 14 ಇ | ಅರ್ಹ ನ್ಯಾಯಯುತ ಸ್ಪರ್ಧಿ ಅಭ್ಯರ್ಥಿಗಳ ಪಟ್ಟಿಯನ್ನು ಚುನಾವಣಾ ಚಿಹ್ನೆಯೊಂದಿಗೆ ಪ್ರಕಟಿಸುವುದು | ದಿನಾಂಕ 28.01.2025 ರಂದು ಸಂಜೆ 5-00 ಗಂಟೆಗೆ | ಚುನಾವಣಾ ನಿರ್ವಾಚನಾಧಿಕಾರಿಯವರಿಂದ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ |
| 8. | | ಚುನಾವಣೆ ನಡೆಯುವ ದಿನಾಂಕ ಮತ್ತು ಸಮಯ, ಸ್ಥಳ | ದಿನಾಂಕ 02.02.2025 ರಂದು ಪೂರ್ವಾಹ್ನ 9-00 ಗಂಟೆಯಿಂದ ಅಪರಾಹ್ನ 4-00 ರ ತನಕ | ಚುನಾವಣಾ ನಿರ್ವಾಚನಾಧಿಕಾರಿಯವರಿಂದ 1) ದಕ್ಷಿಣ ಕನ್ನಡ ಜಿಲ್ಲೆಯ ಶಿಕ್ಷಕ ಸದಸ್ಯರಿಗೆ- ಕೆನರಾ ಪ್ರೌಢ ಶಾಲೆ, ಕೊಡಿಯಾಲ್‌ಬೈಲ್, ಮಂಗಳೂರು ಇಲ್ಲಿ 2) ಉಳಿದ ಜಿಲ್ಲೆಯ ಶಿಕ್ಷಕ ಸದಸ್ಯರಿಗೆ-ಎಂ.ಜಿ.ಎಂ ಕಾಲೇಜು, ಕುಂಜಿಬೆಟ್ಟು, ಉಡುಪಿ ಇಲ್ಲಿ |
| 9. | 14 ಎಕ್ಸ್ | ಮತ ಎಣಿಕೆ | ದಿನಾಂಕ 02.02.2025 ರಂದು ಮತದಾನದ ನಂತರ | ಚುನಾವಣಾ ನಿರ್ವಾಚನಾಧಿಕಾರಿಯವರಿಂದ ಎಂ.ಜಿ.ಎಂ ಕಾಲೇಜು, ಕುಂಜಿಬೆಟ್ಟು, ಉಡುಪಿ ಇಲ್ಲಿ (ದಕ್ಷಿಣ ಕನ್ನಡ ಜಿಲ್ಲೆಯ ಶಿಕ್ಷಕ ಸದಸ್ಯರು ಚಲಾಯಿಸಿದ ಮತಗಳನ್ನು ಒಳಗೊಂಡು) |
| 10. | 14 ವೈ | ಚುನಾವಣಾ ಫಲಿತಾಂಶ ಪ್ರಕಟಿಸುವ ದಿನಾಂಕ ಮತ್ತು ಸಮಯ | ದಿನಾಂಕ 02.02.2025 ರಂದು ಮತಗಳ ಎಣಿಕೆ ಮುಗಿದ ನಂತರ | ಚುನಾವಣಾ ನಿರ್ವಾಚನಾಧಿಕಾರಿಯವರಿಂದ ಎಂ.ಜಿ.ಎಂ ಕಾಲೇಜು, ಕುಂಜಿಬೆಟ್ಟು, ಉಡುಪಿ ಇಲ್ಲಿ |

## ಸೂಚನೆಗಳು

1. ನಾಮಪತ್ರಗಳನ್ನು ಸ್ವತ: ಚುನಾವಣಾ ನಿರ್ವಾಚನಾಧಿಕಾರಿಯಿಂದ ಅಥವಾ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಂದ ಪಡೆದು ವೇಳಾ ಪಟ್ಟಿಯ ಪ್ರಕಾರ ದಿನಾಂಕ 19.01.2025 ರಿಂದ 25.01.2025 ರವರೆಗೆ ಸಮಯ ಬೆಳಿಗ್ಗೆ 11–00 ಗಂಟೆಯಿಂದ ಮಧ್ಯಾಹ್ನ 2–00 ಗಂಟೆಯವರೆಗೆ ಬ್ಯಾಂಕಿನ ಚುನಾವಣಾ ನಿರ್ವಾಚನಾಧಿಕಾರಿಯವರಿಗೆ ತಲುಪಿಸತಕ್ಕದ್ದು.
2. ನಾಮಪತ್ರಗಳ ಪರಿಶೀಲನೆಯ ಸಂದರ್ಭದಲ್ಲಿ ಉಮೇದುವಾರರು ಹಾಜರಿರಬಹುದು.
3. ನಾಮಪತ್ರ ಸಲ್ಲಿಸುವ ಪ.ಜಾತಿ/ಪ.ಪಂಗಡ, ಮಹಿಳಾ ಸದಸ್ಯರು ಹಾಗೂ ಹಿಂದುಳಿದ ವರ್ಗದ ಸದಸ್ಯರು ರೂ.1,000 ಮತ್ತು ಸಾಮಾನ್ಯ ಸದಸ್ಯರು ರೂ.2,000 ಚುನಾವಣಾ ಠೇವಣಿಯನ್ನು ಬ್ಯಾಂಕಿನಲ್ಲಿ ಪಾವತಿಸಿ, ರಶೀದಿ ಪಡೆದು ನಾಮಪತ್ರಕ್ಕೆ ಲಗತ್ತಿಸಬೇಕು.
4. ನಾಮಪತ್ರ/ಉಮೇದುವಾರರ ಅರ್ಜಿಗಳಿಗೆ ಮತ ಚಲಾಯಿಸಲು ಅರ್ಹತೆಯಿರುವ ಅದೇ ಕ್ಷೇತ್ರದ ಕನಿಷ್ಠ ಓರ್ವ ಸದಸ್ಯರು ನಾಮಪತ್ರದಲ್ಲಿ ಸಹಿ ಮಾಡುವ ಮೂಲಕ ಸೂಚಿಸತಕ್ಕದ್ದು. ಒಬ್ಬ ಅಭ್ಯರ್ಥಿಗೆ ಸೂಚಿಸಿದ ಸದಸ್ಯರು ಅದೇ ಕ್ಷೇತ್ರದ ಬೇರೊಬ್ಬ ಅಭ್ಯರ್ಥಿಗೆ ಸೂಚಿಸುವಂತಿಲ್ಲ.
5. ನಾಮಪತ್ರಗಳನ್ನು ಹಿಂದಕ್ಕೆ ಪಡೆಯುವ ಅರ್ಜಿಗಳನ್ನು ಬ್ಯಾಂಕಿನ ಚುನಾವಣಾ ನಿರ್ವಾಚನಾಧಿಕಾರಿಯವರಿಗೆ ತಲುಪಿಸತಕ್ಕದ್ದು.
6. ಬ್ಯಾಂಕಿನ ಉಪವಿಧಿಗಳಲ್ಲಿ ನಿಗದಿಪಡಿಸಿದಷ್ಟು ಮೊಬಲಗಿನ ಒಂದು ಪೂರ್ಣ ಷೇರು (ರೂ. 400/–) ಪಡೆದಿರುವ ಸದಸ್ಯರು ಮತ್ತು ಬ್ಯಾಂಕಿನ ಉಪವಿಧಿಗಳಲ್ಲಿ ನಿಗದಿಪಡಿಸಿದ ಕನಿಷ್ಟ ಸೇವೆಗಳನ್ನು ಹಿಂದಿನ 5 ವರ್ಷಗಳಲ್ಲಿ ಕನಿಷ್ಟ 2 ವರ್ಷ ಬಳಸಿಕೊಂಡಿರುವ ಹಾಗೂ ಹಿಂದಿನ 5 ಮಹಾಸಭೆಗಳಲ್ಲಿ ಕನಿಷ್ಟ 2 ಮಹಾಸಭೆಯಲ್ಲಿ ಭಾಗವಹಿಸಿರುವವರು ಮಾತ್ರ ಸ್ಪರ್ಧಿಸುವ ಮತ್ತು ಮತ ನೀಡುವ ಹಕ್ಕನ್ನು ಹೊಂದಿರುತ್ತಾರೆ.
7. ಕರ್ನಾಟಕ ಸಹಕಾರ ಸಂಘಗಳ ನಿಯಮ 13(ಎ) ರಂತೆ ಬ್ಯಾಂಕಿನ ಪ್ರತಿಯೊಬ್ಬ ಅರ್ಹ ಸದಸ್ಯರು ಭಾವಚಿತ್ರವುಳ್ಳ ಅಧಿಕೃತ ಗುರುತಿನ ಚೀಟಿಯನ್ನು ಹೊಂದಿರತಕ್ಕದ್ದು. ಮತ್ತು ನಿಯಮ 14(25)ರಂತೆ ಹಾಜರುಪಡಿಸದೆ ಇದ್ದಲ್ಲಿ ಮತದಾನಕ್ಕೆ ಅವಕಾಶವಿರುವುದಿಲ್ಲ.
8. ಉಮೇದುವಾರರು ತಮ್ಮ ನಾಮಪತ್ರಗಳನ್ನು ಸಮರ್ಪಕವಾಗಿ ಭರ್ತಿಗೊಳಿಸತಕ್ಕದ್ದು ಹಾಗೂ ತಾವು ಸ್ಪರ್ಧಿಸುವ ಸ್ಥಾನಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ಒಂದಕ್ಕಿಂತ ಹೆಚ್ಚಿನ ಸ್ಥಾನಕ್ಕೆ ಸ್ಪರ್ಧಿಸುವಂತಿಲ್ಲ.
9. ಚುನಾವಣಾ ಆಯೋಗವು ಮಾನ್ಯತೆ ಪಡೆದಿರುವ ರಾಜಕೀಯ ಪಕ್ಷಗಳಿಗೆ ನೀಡಿರುವ ಚಿಹ್ನೆಗಳನ್ನು ಹೊರತುಪಡಿಸಿ ಮುಕ್ತ ಚಿಹ್ನೆಗಳನ್ನು ಮಾತ್ರ ಪಡೆಯಬಹುದು. ಚಿಹ್ನೆಗಳನ್ನು ನೀಡುವ ಅಂತಿಮ ಅಧಿಕಾರ ಚುನಾವಣಾಧಿಕಾರಿಯವರದ್ದಾಗಿರುತ್ತದೆ.
10. ಸಹಕಾರ ಸಂಘಗಳ ನಿಯಮ 14(ಸಿ)(3)ರಂತೆ ಉಮೇದುವಾರಿಕೆ ಅರ್ಜಿಗಳನ್ನು/ನಾಮಪತ್ರಗಳನ್ನು ಹಿಂದಕ್ಕೆ ಪಡೆಯಲು ಸಲ್ಲಿಸಿರುವ ಸೂಚನೆ/ ಅರ್ಜಿಗಳನ್ನು ಪುನ: ಹಿಂದಕ್ಕೆ ಪಡೆಯಲು ಅವಕಾಶವಿರುವುದಿಲ್ಲ.
11. ಸಹಕಾರ ಸಂಘಗಳ ನಿಯಮ 14(ಸಿ)(1) ರಂತೆ ಉಮೇದುವಾರಿಕೆ ನೋಟೀಸು ಮತ್ತು ನಾಮಪತ್ರಗಳನ್ನು ವಾಪಾಸು ಪಡೆಯುವಾಗ ಸದಸ್ಯರು ಖುದ್ದಾಗಿ ಹಾಜರಾಗಿ ಲಿಖಿತ ಅರ್ಜಿಯನ್ನು ಬರೆದು ಸಹಿ ಮಾಡಿ ಚುನಾವಣಾ ನಿರ್ವಾಚನಾಧಿಕಾರಿಯವರಿಗೆ ತಲುಪಿಸತಕ್ಕದ್ದು.
12. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಮೀಸಲು ಸ್ಥಾನಕ್ಕೆ ಸ್ಪರ್ಧಿಸುವವರು ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ದೃಢೀಕರಣ ಪತ್ರವನ್ನು ನಾಮಪತ್ರದೊಂದಿಗೆ ಲಗತ್ತಿಸಬೇಕು.
13. ನಾಮಪತ್ರವನ್ನು ಸಲ್ಲಿಸುವ ಅಭ್ಯರ್ಥಿಗಳು ಎರಡು ಪಾಸ್‌ಪೋರ್ಟ್ ಸೈಜಿನ ಭಾವಚಿತ್ರವನ್ನು ನೀಡುವುದು.
14. ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲಾ ವಿಭಾಗ, ಪ್ರೌಢ ಶಾಲಾ ವಿಭಾಗ ಮತ್ತು ಪದವಿ ಪೂರ್ವ ವಿದ್ಯಾಲಯಗಳ ವಿಭಾಗದಿಂದ, ಕಾಲೇಜು ವಿಭಾಗ, ವೃತ್ತಿಪರ ಹಾಗೂ ತಾಂತ್ರಿಕ ವಿದ್ಯಾ ಸಂಸ್ಥೆಗಳ ವಿಭಾಗಗಳಿಗೆ ಸಂಬಂಧಿಸಿದಂತೆ ಆಯಾ ವಿಭಾಗದ ಅರ್ಹ ಸದಸ್ಯರೇ ಸ್ಪರ್ಧಿಸತಕ್ಕದ್ದು ಹಾಗೂ ಆಯಾಯ ವಿಭಾಗದ ಸದಸ್ಯರಿಂದಲೇ ಚುನಾಯಿತರಾಗತಕ್ಕದ್ದು.
15. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮೀಸಲು ಸ್ಥಾನಕ್ಕೆ ಹಾಗೂ ಮಹಿಳಾ ಮೀಸಲು ಸ್ಥಾನಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲಾ ವಿಭಾಗದ ಅರ್ಹ ಸದಸ್ಯರು ಮತ್ತು ಪ್ರೌಢ ಶಾಲಾ ವಿಭಾಗದ ಅರ್ಹ ಸದಸ್ಯರು ಮಾತ್ರ ಸ್ಪರ್ಧಿಸಲು ಅವಕಾಶವಿರುತ್ತದೆ.
16. ಹಿಂದುಳಿದ ವರ್ಗಗಳ ಮೀಸಲು ಸ್ಥಾನಗಳಿಗೆ ಸ್ಪರ್ಧಿಸಲು ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲಾ ವಿಭಾಗದ ಮತ್ತು ಕಾಲೇಜು ವಿಭಾಗದ ಅರ್ಹ ಸದಸ್ಯರಿಗೆ ಮಾತ್ರ ಅವಕಾಶವಿರುತ್ತದೆ.
17. ಠೇವಣಾತಿ ಮೀಸಲು ಸ್ಥಾನಕ್ಕೆ ಸಂಬಂಧಿಸಿದಂತೆ ನಾಮಪತ್ರ ಸಲ್ಲಿಸುವ ದಿನಾಂಕಕ್ಕಿಂತ ಒಂದು ವರ್ಷದ ಹಿಂದೆ ರೂ.1,00,000/– ವನ್ನು ನಿರಖು ಠೇವಣಿ/ಕೆ.ಸಿ.ಸಿ ಇರಿಸಿರುವ ಸದಸ್ಯರು ಮಾತ್ರ ಸ್ಪರ್ಧಿಸಲು ಅವಕಾಶವಿರುತ್ತದೆ. ಆಯ್ಕೆಯಾದ ಮುಂದಿನ 5 ವರ್ಷಗಳ ಕಾಲ ಸದ್ರಿ ಠೇವಣಿಯು ಊರ್ಜಿತದಲ್ಲಿರತಕ್ಕದ್ದು.
18. ದಿನಾಂಕ 02.02.2025 ರಂದು ಸಂಜೆ 4–00 ಗಂಟೆಗೆ ಮತದಾನ ಮುಗಿದ ನಂತರ ಉಳಿದ ಜಿಲ್ಲೆಯ ಶಿಕ್ಷಕ ಸದಸ್ಯರು ಚಲಾಯಿಸಿದ ಮತಗಳು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಶಿಕ್ಷಕ ಸದಸ್ಯರು ಚಲಾಯಿಸಿದ ಮತಗಳನ್ನು ಒಳಗೊಂಡು ಎಂ.ಜಿ.ಎಂ. ಕಾಲೇಜು, ಕುಂಜಿಬೆಟ್ಟು, ಉಡುಪಿ ಇಲ್ಲಿ ಮತ ಎಣಿಕೆ ನಡೆಸಿ ಫಲಿತಾಂಶ ಪ್ರಕಟಿಸಲಾಗುವುದು.

(ರಮೇಶ್ ಹೆಚ್.ಎನ್.)
ಚುನಾವಣಾ ನಿರ್ವಾಚನಾಧಿಕಾರಿ
ಟೀಚರ್ಸ್ ಕೋ–ಆಪರೇಟಿವ್ ಬ್ಯಾಂಕ್ (ನಿ), ಉಡುಪಿ
ಹಾಗೂ ಸಹಕಾರ ಸಂಘಗಳ ಉಪನಿಬಂಧಕರು
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಸ್ಥಳ: ಉಡುಪಿ
ದಿನಾಂಕ: 13.01.2025